





# ಎರಡು ಮುಖದ ಬೆಕ್ಕು!

ದೇಹ ಪರಸ್ಪರ ಅಂಟಿಕೊಂಡಿರುವ ಸಯಾಮಿ ಅವಳಿಗಳ ಬಗ್ಗೆ ಕೇಳಿದ್ದೇವೆ, ಆದರೆ ಇಲ್ಲಿರುವುದು ಸಯಾಮಿ ಅವಳಿಯಲ್ಲ, ಬದಲಾಗಿ ಸಯಾಮಿ ಮುಖ ಹೊಂದಿರುವ ಬೆಕ್ಕು!

ಫ್ರಾಂಕ್ ಆ್ಯಂಡ್ ಲೂಯಿ ಎಂಬ ಹೆಸರಿನ ಈ ಬೆಕ್ಕು ಅಮೆರಿಕಾದ ಮೆಸಾಚುಸೆಟ್ಸ್ ನಗರದಲ್ಲಿದೆ. ಜಗತ್ತಿನಲ್ಲೇ ಅತಿ ಹೆಚ್ಚು ವರ್ಷಗಳ ಕಾಲ ಬಾಳಿದ ಈ ಜೇನಸ್ ಬೆಕ್ಕು ಗಿನ್ನೆಸ್ ದಾಖಲೆ ನಿರ್ಮಿಸಿದೆ.

ಎರಡು ಮುಖ ಹೊಂದಿರುವ ಕಾರಣ ಇದನ್ನು ಜೇನಸ್ ಎಂಬ ರೋಮನ್ ದೇವತೆಗೆ ಹೋಲಿಸಲಾಗಿದೆ. ಇತರ ಬೆಕ್ಕುಗಳಂತೆ ಸದಾ ಉತ್ಸಾಹದಿಂದ ಬದುಕುತ್ತಿರುವ ಈ ಸಯಾಮಿ ಬೆಕ್ಕು ಎಂದರೆ ಮನೆಮಂದಿಗೆಲ್ಲ ಅಚ್ಚುಮೆಚ್ಚು.

‘ಸಾಮಾನ್ಯವಾಗಿ ಈ ರೀತಿಯ ತೊಂದರೆಯೊಂದಿಗೆ ಜನಿಸುವ ಬೆಕ್ಕು ಇಲ್ಲವೇ ಯಾವುದೇ ಪ್ರಾಣಿ ಬಹಳ ಕಾಲ ಜೀವಿಸುವ ಸಾಧ್ಯತೆ ತುಂಬಾ ಕಡಿಮೆ. ಅದೇನಿದ್ದರೂ ಅದರ ಆಯುಷ್ಯ ಕೆಲವೇ ತಿಂಗಳಷ್ಟೇ, ಆದರೂ ಈ ಬೆಕ್ಕು ಯಾವುದೇ ತೊಂದರೆಯಿಲ್ಲದೆ ಆರೋಗ್ಯವಂತವಾಗಿದೆ’ ಎನ್ನುತ್ತಾರೆ ಬೆಕ್ಕನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿರುವ ಅದರ ಮಾಲಕಿ ಮಾರ್ಟಿ ಸ್ಟೀವನ್ಸ್.

ಅಂದ ಹಾಗೆ ಎರಡು ಮುಖದ ಈ ಬೆಕ್ಕಿಗೆ ಎರಡು ಬಾಯಿ, ಎರಡು ಕಿವಿ ಮತ್ತು ಮೂರು ಕಣ್ಣುಗಳಿವೆ. ಫ್ರಾಂಕ್ ಎನ್ನುವುದು ಒಂದು ಮುಖದ ಹೆಸರಾದರೆ, ಲೂಯಿ ಎನ್ನುವುದು ಎರಡನೇ ಮುಖದ ಹೆಸರು. ಇಲ್ಲಿ ಫ್ರಾಂಕ್ ತನ್ನ ಬಾಯಿಯಿಂದ ಆಹಾರ ಸೇವನೆ ಮಾಡುತ್ತದೆ, ಲೂಯಿಯ ಬಾಯಿ ರಚನೆ ಸಮರ್ಪಕವಾಗಿಲ್ಲದ ಕಾರಣ ಇತರ ಕೆಲಸಗಳಿಗೆ ಉಪಯೋಗಿಸುತ್ತದೆ.

ಒಟ್ಟಿನಲ್ಲಿ ತನ್ನ ಈ ವಿಚಿತ್ರ ಮುಖದಿಂದಾಗಿ ಜನರ ಮನಸೆಳೆದಿರುವ ಫ್ರಾಂಕ್ ಆ್ಯಂಡ್ ಲೂಯಿ, ಯೂ ಟ್ಯೂಬ್‌ನಲ್ಲೂ ಜನಪ್ರಿಯತೆ ಗಳಿಸಿದೆ.

■ ಕಿರಣ್ ಇಜಿಮಾನ್